# ಜಾಲತಾಣಗಳಿಗೆ ಸೆನ್ಸಾರ್?

ಸಾಮಾಜಿಕ ಸಂವಹನ ಜಾಲ ತಾಣಗಳ ಮೂಲಕ ಸಕಾರಾತ್ಮಕ ಮಾಹಿತಿ, ಸಂದೇಶಗಳಷ್ಟೇ ರವಾನೆಯಾಗುತ್ತಿಲ್ಲ. ಜಾತಿ, ಜನಾಂಗ, ಭಾಷೆ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಚೋದನಕಾರಿ ಮಾಹಿತಿ ವಿನಿಮಯವೂ ಸೇರಿದಂತೆ ಮುಕ್ತ ಲೈಂಗಿಕತೆ, ಅಶ್ಲೀಲ ವೀಡಿಯೋ ಚಿತ್ರಗಳು ಇತ್ಯಾದಿಗಳು ಜಗತ್ತಿನ ಉದ್ದಗಲಕ್ಕೂ ವಿನಿಮಯವಾಗುತ್ತಿವೆ.



ಸಾಮಾಜಿಕ ಸಂವಹನ ತಾಣಗಳಿಗೆ ಕಡಿವಾಣ ಹಾಕುವ ಚಿಂತನೆಗೆ ಕೇಂದ್ರ ಸರ್ಕಾರ ಮುಂದಾಗಿದೆ. ಸಂಪರ್ಕ ಖಾತೆ ಸಚಿವ ಕಪಿಲ್ ಸಿಬಲ್ ಅವರು 'ಸಾಮಾಜಿಕ ತಾಣಗಳ ಮೂಲಕ ನಿಂದನಾತ್ಮಕ ಸಂದೇಶ, ಮಾಹಿತಿಗಳನ್ನು ರವಾನಿಸುವ ವ್ಯವಸ್ಥೆಯನ್ನು ನಿಯಂತ್ರಣಕ್ಕೆ ಒಳಪಡಿಸುವ ಅಗತ್ಯವಿದೆ' ಎಂದು ಹೇಳಿದ್ದಾರೆ. ಚೀನಾ ದೇಶದಲ್ಲಿರುವ 'ಇಂಟರ್‌ನೆಟ್ ಸೆನ್ಸಾರ್ ಶಿಪ್' ವ್ಯವಸ್ಥೆ ಮಾದರಿಯಲ್ಲಿ ನಿಯಂತ್ರಣ ಮಾಡುವ ಉದ್ದೇಶ ಸರ್ಕಾರಕ್ಕೆ ಇಲ್ಲ ಎಂದೂ ಹೇಳಿದ್ದಾರೆ. ಆದರೆ ನಿಯಂತ್ರಣದ ಸ್ವರೂಪ ಹೇಗಿರುತ್ತದೆ ಎಂದು ಅವರು ಹೇಳಿಲ್ಲ. ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿ ವಿರುದ್ಧ ಅವಹೇಳನಕಾರಿ ಮಾಹಿತಿ, ಸಂದೇಶಗಳನ್ನು ಅಂತರ್ಜಾಲ ತಾಣಗಳ ಮೂಲಕ ಹರಿಯಬಿಡುವ ಪ್ರವೃತ್ತಿಗೆ ಕಡಿವಾಣ ಹಾಕುವುದೇ ನಿಯಂತ್ರಣದ ಏಕೈಕ ಉದ್ದೇಶ ಎಂದು ಸಿಬಲ್‌ರ ಹೇಳಿಕೆಯನ್ನು ಅರ್ಥೈಸಲಾಗಿದೆ.

ಸಾಮಾಜಿಕ ಸಂವಹನ ತಾಣಗಳ ಮೂಲಕ ಯಾವುದೇ ಸಂದೇಶ ಅತ್ಯಂತ ಕ್ಷಿಪ್ರ ಸಮಯದಲ್ಲಿ ಲಕ್ಷಾಂತರ ಜನರಿಗೆ ತಲುಪುವ ಸಾಧ್ಯತೆ ಇರುವುದರಿಂದ ಸಹಜವಾಗಿಯೇ ಇವುಗಳ ವಿರುದ್ಧ ಆಡಳಿತಾರೂಢರಿಗೆ ಆತಂಕವಿದೆ. ಸಂವಹನ ತಾಣಗಳ ಮೂಲಕ ದೇಶದ ಪ್ರಮುಖ ನಾಯಕರು ಮತ್ತು ಗಣ್ಯರ ನಡವಳಿಕೆಗಳನ್ನು ಗೇಲಿ ಮಾಡುವ ಪ್ರಯತ್ನಗಳು ನಡೆಯುತ್ತಿರುವುದು ಗುಟ್ಟೇನಲ್ಲ. ಯಾರನ್ನೇ ಆಗಲಿ ಕೆಟ್ಟದಾಗಿ ಚುಡಾಯಿಸಿ ಅವರ ಚಾರಿತ್ರ್ಯಹರಣ ಮಾಡುವಂತಿದ್ದರೆ ಅಂಥವರನ್ನು ಶಿಕ್ಷಿಸಲು ಈಗಿರುವ ಕಾನೂನಿನಲ್ಲಿ ಅವಕಾಶವಿದೆ. ಸೈಬರ್ ಅಪರಾಧಗಳ ಪತ್ತೆ ಮತ್ತು ವಿಚಾರಣೆಗೆ ಸರ್ಕಾರ ವ್ಯವಸ್ಥೆ ಮಾಡಿದೆ. ಈ ವ್ಯವಸ್ಥೆಯಲ್ಲಿ ಲೋಪಗಳಿದ್ದರೆ ಅದನ್ನು ಸರಿಪಡಿಸಬಹುದು. ಅಗತ್ಯಬಿದ್ದರೆ ಕಾನೂನಿಗೆ ತಿದ್ದುಪಡಿ ತಂದು ಸೈಬರ್ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಅವಕಾಶವಿದೆ. ಹೀಗಾಗಿ ಹೊಸ ನಿಯಂತ್ರಣ ಕ್ರಮಗಳ ಅಗತ್ಯವಿಲ್ಲ. ಅದಕ್ಕೆ ಜನರ ತೆರಿಗೆ ಹಣವನ್ನು ವೆಚ್ಚ ಮಾಡುವುದು ಸಮರ್ಥನೀಯ ಅಲ್ಲ.

ಸಾಮಾಜಿಕ ಸಂವಹನ ತಾಣಗಳ ಬಗ್ಗೆಯೇ ಜಗತ್ತಿನ ಹಲವು ದೇಶಗಳ ಸರ್ಕಾರಗಳಿಗೆ ಅತೃಪ್ತಿ ಇದೆ. ಇತ್ತೀಚಿನ ವರ್ಷಗಳಲ್ಲಿ ಅರಬ್ ದೇಶಗಳ ಸರ್ವಾಧಿಕಾರಿಗಳ ವಿರುದ್ಧ ವ್ಯಕ್ತವಾದ ಪ್ರತಿಭಟನೆ ಜನಾಂದೋಲನದ ಸ್ವರೂಪ ಪಡೆದುಕೊಳ್ಳಲು ಸಾಮಾಜಿಕ ಸಂವಹನಾ ತಾಣಗಳೇ ಕಾರಣ ಎಂಬ ಅಭಿಪ್ರಾಯವೂ ಇದೆ. ಈ ದೇಶಗಳಲ್ಲಿ ಸರ್ಕಾರ ಮತ್ತು ಜನರ ನಡುವೆ ನಡೆಯುತ್ತಿದ್ದ ಸಂಘರ್ಷವನ್ನು ಹೊರ ಜಗತ್ತಿಗೆ ಗೊತ್ತಾಗದಂತೆ ತಡೆಯುವ ಪ್ರಯತ್ನವೂ ನಡೆಯಿತು. ಸಾಮಾಜಿಕ ಸಂವಹನ ತಾಣಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡರೆ ಸರ್ಕಾರದ ಭ್ರಷ್ಟಾಚಾರ ಮತ್ತಿತರ ಕಾನೂನುಬಾಹಿರ ಕೃತ್ಯಗಳನ್ನು ಜನರ ಗಮನಕ್ಕೆ ಬಾರದಂತೆ ತಡೆಯಬಹುದು ಎಂಬ ಭಾವನೆ ಅಮೆರಿಕಾ ಸೇರಿದಂತೆ ಅನೇಕ ರಾಷ್ಟ್ರಗಳಿಗಿದೆ. ಭಾರತದಲ್ಲಿ ಮಾಹಿತಿ ಹಕ್ಕು ಕಾಯಿದೆ ಜಾರಿಗೆ ಬಂದ ನಂತರ ಸರ್ಕಾರದ ಮಟ್ಟದಲ್ಲಿ ನಡೆಯುವ ಅವ್ಯವಹಾರಗಳೆಲ್ಲ ಸಂವಹನ ತಾಣಗಳ ಮೂಲಕ ಜನರ ಗಮನಕ್ಕೆ ಬರುತ್ತಿವೆ. ಕಪಿಲ್ ಸಿಬಲ್ ಅವರಿಗೆ ಪ್ರಧಾನಿ, ಸೋನಿಯಾ ಗಾಂಧಿ ಅವರನ್ನು ರಕ್ಷಣೆ ಮಾಡುವುದರ ಜತೆಗೆ ತಮ್ಮ ಸರ್ಕಾರದ ಅವ್ಯವಹಾರಗಳು ಜನರ ಗಮನಕ್ಕೆ ಬಾರದಂತೆ ತಡೆಯುವ ಉದ್ದೇಶವೂ ಇರಬಹುದು.

ಸಾಮಾಜಿಕ ಸಂವಹನ ತಾಣಗಳ ಮೂಲಕ ಮಾಹಿತಿ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನಿಯಂತ್ರಣಕ್ಕೆ ಒಳಪಡಿಸುವುದು ಪ್ರಾಯೋಗಿಕವಾಗಿ ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವೂ ಇದೆ. ನಿಯಂತ್ರಣವೆಂದರೆ ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ ಅಂತರ್ಜಾಲ ವ್ಯವಸ್ಥೆಯನ್ನು ಸ್ಥಗಿತಗೊಳಿಸಬಹುದಷ್ಟೇ. ಅದೇನೇ ಇರಲಿ, ಮಾಹಿತಿಗಳ ವಿನಿಮಯವನ್ನು ನಿಯಂತ್ರಿಸುವುದೆಂದರೆ ಜನರ ಮೂಲಭೂತ ಹಕ್ಕನ್ನು ನಿರಾಕರಿಸಿದಂತೆ.

ಸಾಮಾಜಿಕ ಸಂವಹನ ಜಾಲ ತಾಣಗಳ ಮೂಲಕ ಸಕಾರಾತ್ಮಕ ಮಾಹಿತಿ, ಸಂದೇಶಗಳಷ್ಟೇ ರವಾನೆಯಾಗುತ್ತಿಲ್ಲ. ಜಾತಿ, ಜನಾಂಗ, ಭಾಷೆ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಚೋದನಕಾರಿ ಮಾಹಿತಿ ವಿನಿಮಯವೂ ಸೇರಿದಂತೆ ಮುಕ್ತ ಲೈಂಗಿಕತೆ, ಅಶ್ಲೀಲ ವೀಡಿಯೋ ಚಿತ್ರಗಳು ಇತ್ಯಾದಿಗಳು ಜಗತ್ತಿನ ಉದ್ದಗಲಕ್ಕೂ ವಿನಿಮಯವಾಗುತ್ತಿವೆ. ಇದಕ್ಕೆ ಎಳೆಯರು ಹಾಗೂ ಯುವಜನರು ಬಲಿಯಾಗುತ್ತಿದ್ದಾರೆ ಎಂಬ ಕಳವಳ ಜಗತ್ತಿನಾದ್ಯಂತ ವ್ಯಕ್ತವಾಗಿದೆ. ಇದಕ್ಕೆ ಕಡಿವಾಣ ಇರಬೇಕು ಎಂಬ ವಾದವನ್ನು ಸುಲಭವಾಗಿ ತಳ್ಳಿ ಹಾಕುವಂತಿಲ್ಲ. ಸಚಿವ ಕಪಿಲ್ ಸಿಬಲ್ ಅವರ ಕಾಳಜಿ ಏನೇ ಇರಲಿ, ಸಾಮಾಜಿಕ ಸಂವಹನ ತಾಣಗಳ ಮೂಲಕ ವಿನಿಮಯವಾಗುತ್ತಿರುವ ಮಾಹಿತಿಗಳನ್ನು ನಿಯಂತ್ರಣಕ್ಕೆ ಒಳಪಡಿಸಬೇಕೇ, ಬೇಡವೇ ಎಂಬ ಬಗ್ಗೆ ಅರ್ಥಪೂರ್ಣ, ಆರೋಗ್ಯಕರ ಚರ್ಚೆ ನಡೆಯಬೇಕು. ಸರ್ಕಾರವೇ ಅದಕ್ಕೆ ವೇದಿಕೆ ಕಲ್ಪಿಸಬೇಕು.

■ ಪ್ರೇಮಕುಮಾರ್ ಹರಿಯಬ್ಬೆ